ತಂದು ಬೇರೊಂದು ಊರಿನಲ್ಲಿ ಅದನ್ನು ಮಾರುವ ವ್ಯಾಪಾರ ಅವರದು. ದಾರಿಯ ನಡುವೆ ರಾತ್ರಿ ವಿರಾಮಕ್ಕಾಗಿ ಸಾಧುವೊಬ್ಬನ ಮನೆಯಲ್ಲಿ ತಂಗುತ್ತಾರೆ. ಮಹಾ ಜ್ಞಾನಿಯೂ, ಜೊತೆಗೆ ಅತಿಥಿ ಸತ್ಕಾರಕ್ಕೆ ಹೆಸರುವಾಸಿಯೂ ಆದವ ಆ ಸಾಧು, ಈರ್ವರಲ್ಲಿ ಕಬ್ಬಿಣದ ವ್ಯಾಪಾರಿಗೇ ಪ್ರಾಮುಖ್ಯತೆ ನೀಡಿ ಹೆಚ್ಚಿನ ಉಪಚಾರ ಮಾಡುತ್ತಾನೆ. ಆ ವರ್ತಕರಿಬ್ಬರೂ ಅಲ್ಲಿಂದ ಹೊರಟು ತಾವು ತಲುಪಬೇಕಿದ್ದ ಊರಿನಲ್ಲಿ ಖರೀದಿ ವ್ಯವಹಾರ ಮುಗಿಸಿ ವಾಪಸ್ಸು ಬರುವಾಗ ಪುನಃ ಅದೇ ಸಾಧುವಿನ ಮನೆಯಲ್ಲಿ ತಂಗುತ್ತಾರೆ. ಈ ಬಾರಿ ಸಾಧು ಚರ್ಮದ ವ್ಯಾಪಾರಿಯನ್ನು ಹೆಚ್ಚಿನ ಆಸ್ಥೆಯಿಂದ ಉಪಚರಿಸುತ್ತಾನೆ. ಆತನ ಈ ನಡೆಯಿಂದ ಗೊಂದಲಗೊಂಡ ಅವರು ತಾರತಮ್ಯಕ್ಕೆ ಕಾರಣವೇನೆಂದು ವಿಚಾರಿಸುತ್ತಾರೆ. 'ನಿಮ್ಮ ಮನಸ್ಥಿತಿಗೆ ತಕ್ಕಂತಹ ಉಪಚಾರ ಮಾಡಿರುವೆ, ಒಳ್ಳೆಯ ಆಲೋಚನೆಯುಳ್ಳವರಿಗೆ ಒಳ್ಳೆಯ ಸತ್ಕಾರ ನೀಡುವುದು ಧರ್ಮ' ಎನ್ನುತ್ತಾನೆ ಸಾಧು.

ವಿಷಯವಿಷ್ಟೇ – ಮೊದಲ ದಿನ ತಂಗಿದಾಗ, ತಾವು ಹೊರಟಿರುವ ಊರಿನಲ್ಲಿ ಭೀಕರ ಬರಗಾಲವಿರಲಿ ಎಂದು ಚರ್ಮದ ವ್ಯಾಪಾರಿ ಬಯಸಿದರೆ, ಅಲ್ಲಿ ಸುಭಿಕ್ಷವಿರಲಿ, ಜನರೆಲ್ಲ ಸಿರಿವಂತಿಕೆಯಿಂದ ಮೆರೆಯುತ್ತಿರಲಿ ಎಂಬುದಾಗಿ ಕಬ್ಬಿಣದ ವ್ಯಾಪಾರಿ ಆಶಿಸುತ್ತಿರುತ್ತಾನೆ. ಬರಗಾಲವಿದ್ದರೆ, ಅಲ್ಲಿ ದನ ಕುರಿಗಳೆಲ್ಲ ಎಣಿಕೆಗೂ ಮೀರಿ ಸಾಯುತ್ತಿರುತ್ತವೆ; ಹೀಗಾಗಿ ತೊಗಲು ಅತಿ ಕಡಿಮೆ ಬೆಲೆಯಲ್ಲಿ ದೊರೆಯುತ್ತದೆ ಎಂಬುದು ಚರ್ಮದವನ ಆಲೋಚನೆ. ಸಿರಿವಂತಿಕೆಯ ಊರಲ್ಲಿ ಜನರೆಲ್ಲ ಅಧಿಕ ಬೆಲೆಯ ಲೋಹದ ಮೋಹದಲ್ಲೇ ಇರುವುದರಿಂದ, ಕಬ್ಬಿಣಕ್ಕೆ ಅಲ್ಲಿ ಬೇಡಿಕೆಯಿಲ್ಲದೆ ಅಗ್ಗದಲ್ಲಿ ಸಿಗುತ್ತದೆ ಎಂಬುದು ಕಬ್ಬಿಣದವನ ಲೆಕ್ಕಾಚಾರ.

ಅಲ್ಲಿಂದ ವಾಪಸ್ಸಾಗುವಾಗ ಅವರ ಆಲೋಚನೆಗಳು ಅದಲು ಬದಲಾಗಿರುತ್ತವೆ. ಖರೀದಿಸಿದ ವಸ್ತುವನ್ನು ಮಾರಲು ಹೊರಟಿರುವ ಊರಲ್ಲಿ ಸುಭಿಕ್ಷವಿದ್ದರೆ ಶ್ರೀಮಂತರು ಐಷಾರಾಮಿ ಚರ್ಮದ ಚಪ್ಪಲಿ ಉಡುಪುಗಳನ್ನು ತೊಡುವುದರಲ್ಲಿ ಒಲವು ತೋರುತ್ತಾರೆ ಎಂದು ಚರ್ಮದ ವರ್ತಕ ಯೋಚಿಸಿದರೆ, ಊರಲ್ಲಿ ಭೀಕರ ಕ್ಷಾಮವಿದ್ದರೆ ಜನರೆಲ್ಲ ಕೂಲಿ ಕೆಲಸ, ಕೆರೆ ಬಾವಿಗಳನ್ನು ತೋಡುವ ಕಾಯದಲ್ಲಿ ನಿರತರಾಗಿ ಕಬ್ಬಿಣದ ಸಲಕರಣೆಗಳಿಗೆ ಭಾರೀ ಬೇಡಿಕೆ ಇರುತ್ತದೆ ಎಂಬುದಾಗಿ ಕಬ್ಬಿಣದ ವ್ಯಾಪಾರಿ ಕನಸು ಕಾಣುತ್ತಾನೆ.

ಸದಾಶಯದ ಚಿಂತನೆಗೆ ಸದಾ ಒಳ್ಳೆಯ ಪ್ರತಿಫಲವೇ ಸಿಗುತ್ತದೆ ಎಂದು ಸಾರುವ ಈ ಕಥೆ, ಅದೆಷ್ಟು ಚೆನ್ನಾಗಿ ಅರ್ಥಶಾಸ್ತ್ರದ ಪಾಠವನ್ನೂ ಹೇಳುತ್ತದಲ್ಲ! ಒಂದೇ ಕಥೆಯಲ್ಲಿ, ಬೇಡಿಕೆ–ಪೂರೈಕೆ, ಕಾಲ–ದೇಶ, ಲಭ್ಯತೆ–ಅಭಾವ, ಅಗತ್ಯ–ಐಷಾರಾಮ, ಹೀಗೆ ವಸ್ತುವೊಂದರ ಮೌಲ್ಯ ಹಲವು ಸಂಗತಿಗಳ ಮೇಲೆ ಅವಲಂಬಿತವಾಗಿದೆ ಎನ್ನುವ ಸತ್ಯ ಈ ಕಥೆಯನ್ನು ಬಾಲ್ಯದಲ್ಲಿ ಓದುವಾಗ ನನಗೂ ಅರಿವಾಗಿರಲಿಲ್ಲ.

***

